ಆಗುತ್ತದೆ. ನಿಶ್ಶಕ್ತರ ಬಗ್ಗೆ ಸರ್ವರ ಕನ್‌ಸಿಡರೇಷನ್ ತೋರಲು ಬಡ್ಡಿ ವಜಾ ಮಾಡಲು ಪೂರ್ಣವಾದ ಮಾಹಿತಿಗಳನ್ನು ತರಿಸಿಕೊಳ್ಳಲು ಪ್ರಯತ್ನಿಸುತ್ತೇನೆ.

ಶ್ರೀ ಬಿ.ಎ. ಉಮರಬ್ಬ.—ಇಲ್ಲಿ ಸಾಲ ಎಂದರೆ ಸಾಮಾನ್ಯ ಸಾಲಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಇದು ಉತ್ಪಾದಕ ಸಾಲ ಅಲ್ಲ. ರಾಷ್ಟ್ರೀಯ ಅಭಿವೃದ್ಧಿಗೋಸ್ಕರ ಪಕ್ಕಲೆಬ್ಬಿಸಿದ ಬಡವರ ಮೂಲ ಭೂತ ಅವಶ್ಯಕತೆ ಪಸತಿಗಾಗಿ ಕೊಟ್ಟ ಸಾಲ. ಆದ್ದರಿಂದ ವಿಶೇಷ ಆದ್ಯತೆ ಮೇಲೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕಲ್ಬುರ್ಗಿ ಜಿಲ್ಲೆಯ ವಿದ್ಯುಚ್ಛಕ್ತಿ ಬಳಕೆದಾರರಿಗೆ ವಿದ್ಯುಚ್ಛಕ್ತಿ ಮೀಟರ್‌ಗಳನ್ನು ಒದಗಿಸುವ ಬಗ್ಗೆ

*೨೫೯. ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗ).—ಮಾನ್ಯ ವಿದ್ಯುತ್ ಮತ್ತು ಗಣಿ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಲ್ಬುರ್ಗಿ ಜಿಲ್ಲೆಯ ವಿದ್ಯುಚ್ಛಕ್ತಿ ಬಳಕೆದಾರರಿಗೆ ವಿದ್ಯುಚ್ಛಕ್ತಿ ಮೀಟರ್ ಒದಗಿಸದೆ ಇರುವ ಮನೆಗಳ ಸಂಖ್ಯೆ ಎಷ್ಟು ? ಮೀಟರ್ ಒದಗಿಸದಿರಲು ಕಾರಣಗಳೇನು ? ಮತ್ತು ಅದರಿಂದಾಗುವ ಲಾಭ ನಷ್ಟದ ಬಗೆಗೆ ಸರಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರ ಕೈಗೊಂಡ ಕ್ರಮವೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).

ಅ) ಕಲ್ಬುರ್ಗಿ ಜಿಲ್ಲೆಯಲ್ಲಿ ೧-೧-೧೯೮೬ರಲ್ಲಿ ಇರುವಂತೆ ೧೭೫೪೬ ಮನೆಗಳಿಗೆ ವಿದ್ಯುಚ್ಛಕ್ತಿ ಮೀಟರುಗಳಿಲ್ಲದೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ (ಗೃಹ ಬಳಕೆ ಮತ್ತು ಎ.ಇ.ಎಚ್. ಪಂಪ್‌ಸೆಟ್‌ಗಳು) ಮೀಟರ್‌ಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯದಿದ್ದಾಗ ಹೊಸ ಗ್ರಾಹಕರಿಗೆ ಮೀಟರುಗಳಿಲ್ಲದೆ ವಿದ್ಯುತ್ ಸರಬರಾಜು ಮಾಡಲಾಗಿದೆ.

ಹೀಗೆ ಮಾಡುವುದರಿಂದ ನಷ್ಟವಾಗುವುದಿಲ್ಲ, ಏಕೆಂದರೆ. ಮೀಟರಿಲ್ಲದಿದ್ದರೂ ನಿಗದಿಯಾದ ಪ್ರಮಾಣದಲ್ಲಿ ಯೂನಿಟ್ಟುಗಳ ಲೆಕ್ಕದಲ್ಲಿ ಬಿಲ್ಲು ಪಾವತಿ ಮಾಡಲಾಗುತ್ತೆ. ಮತ್ತು ಮೀಟರು ಅಳವಡಿಸಿದ ನಂತರ ೩ ತಿಂಗಳ ಸರಾಸರಿ ಬಳಕೆಯ ಆಧಾರದ ಮೇಲೆ ಪರಿಷ್ಕೃತ ಬಿಲ್ಲನ್ನು ಕೊಟ್ಟು ಹೊಂದಾಣಿಕೆ ಮಾಡಲಾಗುವುದು.

ಆ) ವಿದ್ಯುಚ್ಛಕ್ತಿ ಮಂಡಲಿಯು ವಿದ್ಯುತ್ ಮೀಟರುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕೊಳ್ಳುತ್ತಿದೆ. ಕೆಲವೊಂದು ವೇಳೆ ಸರಬರಾಜಿನಲ್ಲಿನ ವಿಳಂಬದಿಂದಾಗಿ ಮೀಟರುಗಳ ಕೊರತೆ ಉಂಟಾಗುತ್ತದೆ.

ಚಿಕ್ಕೋಡಿ ತಾಲ್ಲೂಕಿನ ಹರಿಜನ ಗಿರಿಜನ ಕಾಲೋನಿಗಳಿಗೆ ವಿದ್ಯುತ್ ಪೈಪ್ ಸಾಲಭ್ಯದ ಬಗ್ಗೆ

೭೪. ಶ್ರೀಮತಿ ಶಕುಂತಲ ತುಕರಾಮ್ ಚೌಗಲೆ (ಚಿಕ್ಕೋಡಿ).—ಮಾನ್ಯ ವಿದ್ಯುಚ್ಛಕ್ತಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಅದರಲ್ಲೂ ಹರಿಜನ, ಮತ್ತು ಗಿರಿಜನ ಕಾಲೋನಿಗಳಿಗೆ ಬೀದಿ ದೀಪ ಒದಗಿಸಲಾಗಿದೆಯೇ ?

ಆ) ಸರಕಾರವು ಭಾಗ್ಯ ಜ್ಯೋತಿಯ ಕಾರ್ಯಕ್ರಮದಲ್ಲಿ ಎಲ್ಲಾ ಹಳ್ಳಿಗಳಿಗೆ ದೀಪಗಳನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).

ಅ) ಚಿಕ್ಕೋಡಿ ತಾಲ್ಲೂಕಿನ ಶಂಕರವಾಡಿ ಹಳ್ಳಿಯ ವಿನಃ ಉಳಿದ ಎಲ್ಲಾ ಹಳ್ಳಿಗಳಲ್ಲೂ ಅದರಲ್ಲೂ ಹರಿಜನ, ಗಿರಿಜನ ಕಾಲೋನಿಗಳಿಗೆ ಬೀದಿ ದೀಪ ಒದಗಿಸಲಾಗಿದೆ,

ಆ) ಭಾಗ್ಯಜ್ಯೋತಿ ಯೋಜನೆಯನ್ನು ವಿದ್ಯುದ್ದೀಕರಣವಾಗಿರುವ ಗ್ರಾಮಗಳಿಗೆ ವಿಸ್ತರಿಸ ಬಹುದು. ಆದರೆ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಗ್ರಾಮಗಳ ವಿದ್ಯುದ್ದೀಕರಣ ಸಾಧ್ಯವಿಲ್ಲ.

ವಿದ್ಯುಚ್ಛಕ್ತಿ ಉಪ ವಿಭಾಗ ತೆರೆಯುವ ಬಗ್ಗೆ

೪೬೪. ಶ್ರೀ ಕೆ. ಕುಶಾಲ (ಸೂಳ್ಯ).—ಮಾನ್ಯ ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಕರ್ನಾಟಕ ವಿದ್ಯುತ್ ಇಲಾಖೆ ಉಪವಿಭಾಗ ತೆರೆಯಲು ಇದ್ದ ಬೇಡಿಕೆ ಈ ತನಕ ಮಂಜೂರಾಗದೆ ಇರಲು ಕಾರಣವೇನು ?

೨. ಇಲ್ಲಿಗೆ ವಿದ್ಯುತ್ ಉಪವಿಭಾಗ ಇಲ್ಲದೆ ತುಂಬಾ ತೊಂದರೆಯಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಆದಕ್ಕೆ ಮಂಜೂರಾತಿ ನೀಡಲಾಗುವುದೆ ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

೧. ರಾಜ್ಯದಲ್ಲಿ ವಿಭಾಗಗಳ ಮತ್ತು ಉಪ ವಿಭಾಗಗಳ ಪುನರ್‌ರಚನೆ ಬಗ್ಗೆ ಬೇಕಾದ ವಿವರಗಳನ್ನು ಸಂಗ್ರಹಿಸಲಾಗುತ್ತಿರುವುದರಿಂದ ಇಲ್ಲಿಯವರೆಗೆ ಸುಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಉಪ ವಿಭಾಗವನ್ನು ಮಂಜೂರು ಮಾಡಲು ಸಾಧ್ಯವಾಗಲಿಲ್ಲ. ಆದರೂ ಸುಳ್ಯದಲ್ಲಿ ಒಂದು ಉಪ ವಿಭಾಗ ತೆಗೆಯುವ ಪ್ರಸ್ತಾವ ಮಂಡಳಿಯ ಗಮನದಲ್ಲಿದೆ.

೨. ಮಂಜೂರಾತಿ ನೀಡುವ ಬಗ್ಗೆ ಮಂಡಳಿಯು ಇನ್ನೂ ಪರಿಶೀಲಿಸುತ್ತಿದೆ.

ರಾಜ್ಯದಲ್ಲಿ ಬರ ಪರಿಹಾರ ಕಾಮಗಾರಿ

೫೮. ಶ್ರೀ ಆರ್. ವೆಂಕಟರಾಮಯ್ಯ (ಮಾಳಬಾಗಿಲು).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈ ವರ್ಷ ಬರಗಾಲ ಪರಿಹಾರಕ್ಕೆ ಮಾಡಿರುವ ವೆಚ್ಚವೆಷ್ಟು ಹಾಗೂ ಖರ್ಚಿನ ಬಗ್ಗೆ ಜಿಲ್ಲಾವಾರು ಅಂಕಿ ಅಂಶಗಳನ್ನು ತಿಳಿಸುವುದು (ಇದರಲ್ಲಿ ಕಾರ್ಮಿಕರಿಗೆ ಸೇರಿದಷ್ಟು ಹಾಗೂ ಸಾಮಾನು ಕೊಂಡದ್ದು ಎಷ್ಟು) ಎಂಬುದನ್ನು ಸಭೆಗೆ ತಿಳಿಸುವುದು ?

ಆ) ಬರಗಾಲದ ಕೆಲಸಗಳನ್ನು ಕಂಟ್ರಾಕ್ಟರ್ ಮತ್ತು ಮುಧ್ಯವರ್ತಿಗಳು ನಡೆಸುತ್ತಿರುವುದಾಗಿ ವರದಿಗಳು ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಇದನ್ನು ತಪ್ಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ಪ್ರಸಕ್ತ ಸಾಲಿನಲ್ಲಿ ೩೧-೧೨-೮೫ರ ವರೆಗೆ ೫೦.೩೬ ಕೋಟಿ ರೂಪಾಯಿಗಳನ್ನು ವಿವಿಧ ಪರಿಹಾರ ಕಾಮಗಾರಿಗಳಿಗಾಗಿ ಪರಿಹಾರ ಶೀರ್ಷಿಕೆಗಳಡಿಯಲ್ಲಿ ಖರ್ಚು ಮಾಡಲಾಗಿದೆ. ಇದರ ಪೈಕಿ ೫೯.೯೨ ಕೋಟಿ ಹಣವನ್ನು ಉದ್ಯೋಗ ಕಾಮಗಾರಿಗಳಿಗಾಗಿ ಖರ್ಚು ಮಾಡಲಾಗಿದೆ (ಖರ್ಚಿನ ವಿವರದ ಪಟ್ಟಿಯನ್ನು ಲಗತ್ತಿಸಿದೆ)

೨) ಮೇಲೆ ಪೇಳಿರುವ ಖರ್ಚಿನ ಜೊತೆಗೆ ವಿವಿಧ ಉದ್ಯೋಗ ಯೋಜನೆಗಳಾದ ಎನ್.ಆರ್.ಇ.ಪಿ ಆರ್.ಎಲ್.ಇ.ಜಿ.ಪಿ. ಮತ್ತು ಡಿ.ಪಿ.ಎ.ಪಿ ಯೋಜನೆಗಳೆಲ್ಲವೂ ಹಾಗೂ ಇಲಾಖಾ ಕಾರ್ಯಕ್ರಮಗಳಲ್ಲೂ ಸಹ ಹಣವನ್ನು ಖರ್ಚು ಮಾಡಲಾಗಿದ್ದು ಒಟ್ಟು ಖರ್ಚಾಗಿರುವ ಹಣ ೧೨೦.೯೧ ಕೋಟಿಗಳು.

೩) ಪರಿಹಾರ ಕಾಮಗಾರಿಗಳ ಶೀರ್ಷಿಕೆಯಡಿಯಲ್ಲಿ ಯಂತ್ರೋಪಕರಣಗಳನ್ನು ಖರೀದಿ ಮಾಡಿರುವುದಿಲ್ಲ.

೪) ಆದರೂ ಉದ್ಯೋಗ ಯೋಜನೆಯಡಿಗಳಲ್ಲಿ ಸಾಮಾನ್ಯವಾಗಿ ೬೦-೪೦ರ ಪ್ರಕಾರ ಕೂಲಿ ಹಾಗೂ ಸಾಮಾನಿಗೆ ಖರ್ಚು ಮಾಡಲಾಗುವುದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.